ನಿಶೆಯ ಅವೇಳೆಯಲ್ಲಿ ಏನೊ ಸೊಳ್ಳೆ ಕಚ್ಚಿತೇನೊ ಎಂದು ಹಾಗೇ ಬೆಳದಿಂಗಳ ಆಕಾಶವ ನೋಡುತ್ತ; ತೊಟ ತೊಟ ರಕ್ತ ಗುಂಡೇಟಿಗೆ ತೊಟ್ಟಿಕ್ಕುತ್ತಿದ್ದರೂ ಏನೂ ಆಗಿಯೇ ಇಲ್ಲಾ... ನಿದ್ದೆ ಬಂತೇನೊ ಎಂದು ಸಾವನ್ನು ಸ್ವೀಕರಿಸಿ ಉಸಿರು ಬಿಡುತ್ತಿದ್ದೆವು... ಅಲ್ಲಿಗೆ ಆ ದರಿದ್ರ ಉದ್ಯಮಿಯ ಊಸು... ಉಸಿರಾಟಗಳ ಪ್ರಶ್ನೆಗೂ ಒಂದು ಉತ್ತರ ಸಿಗುತ್ತಿತ್ತೇನೊ ಎಂದು ಗೋವಿಂದ ದುಃಸ್ವಪ್ನಗಳಲ್ಲಿ ಕನವರಿಸುತ್ತಿದ್ದ. ನನಗೂ ಪರಮಾನಂದನಿಗೂ... ಬಂಡಾಯದ ನನ್ನ ಗುರುಗಳಿಗೂ ಬೇರೆ ಬೇರೆ ಪ್ರಮಾಣಗಳಲ್ಲಿ ಶಿಕ್ಷೆ ಆಗಿತ್ತು. ನೊಂದು ಬೆಂದು ಬಳಲಿ ಬೆಳೆದು ಸುಖವಾಗಿದ್ದ ಕೊನೆಗಾಲದ ನಮ್ಮ ದೇಹದ ಮೇಲೆ ಆಗಿದ್ದ ಹೊಡೆತ ಮಾನಸಿಕ ಆಘಾತ ಹೇಳತೀರದಾಗಿತ್ತು. ಹೆಂಡತಿ ಮಕ್ಕಳೇ ನಮ್ಮ ಬಗ್ಗೆ 'ಛೇ' ಎಂದು ನಿರಾಕರಿಸುವಂತೆ ನಮ್ಮನ್ನು ಟೀವಿಯವರು ತೋರಿದ್ದರು. ಆ ನಟೋರಿಯಸ್ ಕ್ರೈಮ್ ರಿಪೋರ್ಟರ್ ಕೂಡ ಭೂಗತ ದಂಧೆಯ ಪತ್ರಕರ್ತನಾಗಿದ್ದ. ಒಂದು ಕಾಲದ ಗೆಳೆಯ ಆತ. ಅವನೇ ಸಂಪಾದಕನಾಗಿ ಖುದ್ದಾಗಿ ಆಡಿಯೊ ವೀಡಿಯೊ ರೆಕಾರ್ಡ್ ಮಾಡಿ ವರದಿ ಮಾಡಲು ಬಂದಿದ್ದ. 'ಆಲ್ ಮೊಸ್ಟ್ ದೇ ಆರ್ ಇನ್ ದಿ ಸರ್ಕಲ್ ಆಫ್ ಕ್ರೈಮ್... ಬಟ್; ಐ ಡೊಂಟ್ ನೊ ವಾಟ್ ಆಕ್ಚುವಲೀ ಹ್ಯಾಪಂಡ್ ಇನ್ ದಿ ಪಾರ್ಟಿ ಟೈಂ... ಹೇಳಿ ಗೆಳೆಯರೇ... ಆ ದಾಳಿಗೂ ನಿಮಗೂ ಹೇಗೆ ಒಂದು ಅಪರಾಧಿ ಸಂಬಂಧದ ಕೊಂಡಿ ಉಂಟಾಯಿತೂ... ನೀವೀಗಾಗಲೇ ಈ ಹತ್ಯೆ ಅಪರಾಧದಲ್ಲಿ ಪಾಲುಗೊಂಡವರು ಎಂಬುದನ್ನು ಮಾಧ್ಯಮಗಳು ತೋರಿವೆ- ವಿವರಿಸಿವೆ... ಸಿ.ಸಿ.ಕ್ಯಾಮೆರಗಳು ನಿಮ್ಮ ಭಾಗವಹಿಸುವಿಕೆಯ ಬಗ್ಗೆ ಸಾಕ್ಷಿ ನೀಡಿವೆ... ಯಾಕ್ರೀ ಇಷ್ಟೊಂದು ಹೆದರ್ತೀರೀ...ಕಮ್ ವಿತ್ ಮೀ... ಐ ವಿಲ್ ಡೀಲ್ ಆಲ್ ದ ಮ್ಯಾಟರ್... ಯುವರ್ ಕೇಸ್ ಈಸ್ ಆಲ್ ಮೋಸ್ಟ್ ಇನ್ ಮೈ ಫಿಂಗರ್ ಟಿಪ್ಸ್...' ಎಂದು ಆರ್ದ್ರವಾಗಿ ನುಡಿದ. ಕಂಬಿಗಳ ಹಿಂದಿರುವವನಿಗೆ ಎಂತಹ ಭರವಸೇ... ಅಣ್ಣಾ ದಾರಿ ತೋರು ಎಂದು ಕಣ್ಣೀರು ಹಾಕಿದ್ದೆ. ಅವನಿಗೆ ಭೂಗತ ಜಗತ್ತಿಗೂ ನಂಟಿತ್ತು... 'ಯಾವ ಉಗ್ರಗಾಮಿಗಳೂ ಇವರ ಜೊತೆಗಿಲ್ಲಾರೀ... ಬರಿದೇ ಬಡ ಬಂಡಾಯ ವಿಚಾರವಾದಿ ಸಾಹಿತಿಗಳನ್ನು ಸುಮ್ಮನೆ ಯಾಕೆ ಫಿಕ್ಸ್ ಮಾಡಿ ಜಗತ್ತಿನ ಸುದ್ದಿ ಸರ್ಕಾರಗಳಿಗೆ ತಲೆ ನೋವು ತರುತ್ತೀರೀ... ಅಮಾಯಕರು ಕಣ್ರೀ ಇವರೂ...' ಎಂದು ಕೂತಲ್ಲೇ ಯಾವುದಾವುದೊ ಮಂತ್ರಿಗಳಿಗೆ ಪೋನು ಮಾಡಿ... ಈ ಸಂಜೆಯೇ ಇವರು ರಿಲೀಸ್ ಆಗಬೇಕು ಎಂದು ಆ ಮಿತ್ರ ಪತ್ರಕರ್ತ ಅನೇಕರಿಗೆ ಕೆಟ್ಟವನಾಗಿದ್ದರೂ ಆ ಕ್ಷಣಕ್ಕೆ ನಮಗೆ ಒಳ್ಳೆಯವನಾಗಿದ್ದ. ಒಂದು ಕಾಲಕ್ಕೆ ನಾನೂ ಅವನೂ ಗಾಂಧಿ ಬಜಾರಿನ ಸಂದಿಯ ವೈನ್ ಶಾಪಿನಲ್ಲಿ ಮಟ ಮಟ ಮಧ್ಯಾಹ್ನದಲ್ಲೇ ರಾರಾ... ರಮ್ಮ ಕುಡಿದು ಸಮಾಜ ಘಾತುಕರ ಬಗ್ಗೆ ವರದಿ ಬರೆದು ಫೇಮಸ್ ಆಗಿ ನ್ಯಾಯವಾಗಿದ್ದೆವು. ಪರಮಾನಂದ ಕೂಡ ಆ ಕಾಲದ ಭೂಗತ ಜಗತ್ತಿನ ಅಪರಾಧಿಗಳಿಗೆ ಬೆಂಕಿಯಾಗಿದ್ದ. ಹೊರ ಜಗತ್ತಿಗೆ ಈ ಬೆಳಗಿನ ಯಾವ ಹಿನ್ನೆಲೆಗಳೂ ಇರುವುದಿಲ್ಲ. ನಾವು ಬಿಡುಗಡೆಗೆ ಒಳಗಾಗಿದ್ದೆವು. ಆ ಹಳೆಯ ಪತ್ರಕರ್ತ ಗೆಳೆಯ ದೂರ್ತನೆಂದು ವಿಚಾರವಾದಿಗಳ ಅಂಗಳದಲ್ಲಿ ಬಹಳ ಕೆಟ್ಟವನು. ನಾನು ಜೈಲಿನಲ್ಲಿದ್ದಾಗ ಯಾವ ಸಾಹಿತಿಯೂ, ಹೋರಾಟಗಾರರೂ; ವಿಚಾರವಾದಿಗಳೂ ನಮ್ಮ ಪರವಾಗಿ ಬಂದಿರಲಿಲ್ಲ... ಇದನ್ನು ಹೇಗೆ ಅರ್ಥಮಾಡಿಕೊಳ್ಳುವುದು... ಪ್ರತಿಭಟನೆ ಸಾಮೂಹಿಕ ದನಿಯಂತಾದರೆ; ಶಿಕ್ಷೆಯು ವಯಕ್ತಿಕ ಹಿಂಸೆಯ ನರಳಾಟವೇ... ಇದರಿಂದಲೇ ತಾನೆ ದಂಗೆಯ ದನಿ ಸದ್ದಡಗಿರುವುದೂ... ಧಿಕ್ಕಾರ ಹೇಳಬೇಕಾದ ಕೊರಳೆಲ್ಲ ಜಯ ಜಯ ಎನ್ನುವಾಗ ಯಾವ ನ್ಯಾಯದ ದನಿ ಎಂದು ನಾವು ಒಂದು ಅಸಂಗತ ನಾಟಕ ಮುಗಿಸಿದಂತೆ ಹೊರಬಂದೆವು. ಯಾರೂ ನಮ್ಮನ್ನು ಗೌರವದಿಂದ ನೋಡುತ್ತಿರಲಿಲ್ಲ. ನನ್ನ ಹೆಂಡತಿ ಮಕ್ಕಳು ನನ್ನನ್ನು ಒಬ್ಬ ಧೂರ್ತ ಎಂದು ನಿರ್ಧರಿಸಿದ್ದರು. ಖಾಸಗಿ ಕಂಪನಿಯವರು ನನ್ನನ್ನು ಕೆಲಸದಿಂದ ವಜಾ ಮಾಡಿ... ಬರಬೇಕಿದ್ದ ಪೆನ್ಶನ್ ಅರಿಯರ್ಸ್ ಏನೇನೊ ಇಳಿಗಾಲಕ್ಕೆ ಸಂಸಾರಕ್ಕೆ ಬೇಕಿದ್ದವಲ್ಲಾ... ಅವನ್ನೆಲ್ಲ ವಜಾಗೊಳಿಸಿ ಹೊರಹಾಕಿದ್ದರು. ಕೇಸು ಹಾಕಿ ಗೆಲ್ಲುವ ವಿಶ್ವಾಸ ಇರಲಿಲ್ಲ. ವಿಚಾರವಾದಿ ಗೋವಿಂದನ ಹೆಂಡತಿಗೂ ಬಹಳ ವಯಸ್ಸಾಗಿತ್ತು. ಹೆರಿಗೆಯ ಕಾಲದಲ್ಲಿ ಏನೇನೊ ದೈಹಿಕ ಸಮಸ್ಯೆಗಳಾಗಿ ಆಕೆ ಸತ್ತು ಗಂಡು ಮಗು ಬದುಕಿತ್ತು. ನರ್ಸುಗಳು ಉಳಿಸಿದ್ದರು. ಬಂಡಾಯದ ಪ್ರೊಫೆಸರ್ ನನಗೆ ನಾನೇ ಮಸಿ ಬಳಿದುಕೊಂಡೇ... ಈ ಕಾಲ ಇಷ್ಟೊಂದು ಕೇಡಿಗರ ಸ್ವರ್ಗ ಎಂದು